ದಿನಾಂಕ 20.01.2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣೀಕರಿಸಲಾಯಿತು.

**ಪಾಟೀ ಸವಾಲುಃ- ಪ್ರತಿವಾದಿಗಳ ಪರ ವಕೀಲರಾದ ಶ್ರೀ ವಿ ಜಿ ಆರ್ ರವರಿಂದಃ-**

ನಾನು ಮತ್ತು ವಾದಿ ಐಚೆಂಡ ಕುಟುಂಬಸ್ಥರು. ಐಚೆಂಡ ಕುಟುಂಬಸ್ಥರ ನಡುವೆ ಕುಟುಂಬದ ಸ್ವತ್ತುಗಳಿಗೆ ಸಂಬಂಧಿಸಿದಂತೆ ವಿಭಾಗವನ್ನು ಮಾಡಿಕೊಳ್ಳಲಾಗಿದೆ. ವಿಭಾಗವನ್ನು ನಮ್ಮ ಅನುಕೂಲಕ್ಕೆ ತಕ್ಕಂತೆ ಮಾಡಿಕೊಳ್ಳಲಾಗಿದೆ. ಆದರೆ ಬರವಣಿಗೆ ರೂಪದಲ್ಲಿ ಮಾಡಿಕೊಡಿಂರುವುದಿಲ್ಲ. ನಾವುಗಳು ಸ್ವಾಧೀನದಲ್ಲಿರುವ ಸ್ವತ್ತುಗಳನ್ನು ಅಳತೆ ಮಾಡಿಸಿರುತ್ತೇವೆ. ಅಳತೆ ಮಾಡಿಸಿದ ದಿನಾಂಕ ನನಗೆ ಈಗ ನೆನಪಿಲ್ಲ. ದೇವಣಗೇರಿಯಿಂದ ಹಾಲುಗುಂದಕ್ಕೆ ಹೋಗುವ ಮುಖ್ಯ ರಸ್ತೆಯ ಬಲಭಾಗದಲ್ಲಿ ವಾದಿಗೆ 15 ಸೆಂಟ್ಸ್ ಜಮೀನು ಇದ್ದು, ಎಡಭಾಗದಲ್ಲಿ 1 ಎಕರೆ ಜುಮೀನು ಇದೆ. ಅವುಗಳ ಸರ್ವೆ ನಂ. 101. ಸದರಿ ಸರ್ವೆ ನಂಬರ್ ನ ಪಣಹಿಯು ವಾದಿಯ ಹೆಸರಿನಲ್ಲಿ ಇದೆ.

ವಾದಿಯ ತಂದೆ ಸುಬ್ಬಯ್ಯರವರು 1ನೇ ಪ್ರತಿವಾದಿಯ ಗಂಡ ಕಾವೇರಪ್ಪರವರ ವಿರುದ್ದ ದಾವೆಯನ್ನು ಯಾವ ವರ್ಷ ಹೂಡಿದ್ದರು ಎಂಬುದು ನನಗೆ ಗೊತ್ತಿಲ್ಲ. ಸದರಿ ದಾವೆಯನ್ನು ಸರ್ವೆ ನಂ. 101/1 ರ ಸ್ವತ್ತಿಗೆ ಸಂಬಂಧಿಸಿದಂತೆ ಹೂಡಿದ್ದರು. ಸದರಿ ದಾವೆಯಲ್ಲಿ ಏನು ಪರಿಹಾರವನ್ನು ಕೋರಿದ್ದರು ಎಂಬುದು ನನಗೆ ಗೊತ್ತಿಲ್ಲ. ಸದರಿ ದಾವೆ ಸುಬ್ಬಯ್ಯ ರವರ ಪರವಾಗಿ ಡಿಕ್ರಿಯಾಗಿರುತ್ತದೆ ಎಂದು ಅವರು ನನಗೆ ತಿಳಿಸಿದ್ದರು. ನಾನು ತೀರ್ಪಿನ ಪ್ರತಿಯನ್ನು ನೋಡಿರುವುದಿಲ್ಲ. ಪ್ರತಿವಾದಿಗಳು ವಾದಿಗೆ ಸೇರಿದ 15 ಸೆಂಟ್ಸ್ ಜಾಗದಲ್ಲಿ 10-15 ವರ್ಷಗಳಿಂದ ಸ್ವಾಧೀನದಲ್ಲಿ ಇದ್ದಾರೆ. ಪ್ರತಿವಾದಿಗಳು ಸದರಿ ಜಮೀನಿನಲ್ಲಿ ಅಡಿಕೆ ಸಸಿಗಳನ್ನು ನೆಟ್ಟಿರುತ್ತಾರೆ.

ದೇವಣಗೇರಿ ಗ್ರಾಮದಲ್ಲಿ ಪುಗ್ಗೇರ ಕುಟುಂಬಸ್ಥರಿಗೆ ಆಸ್ತಿಗಳು ಇವೆ ಎಂದರೆ ಸರಿ. ವಾದಿಯು ಕಳೆದ 25 ವರ್ಷಗಳಿಂದ ಮೈಸೂರಿನಲ್ಲಿ ನೆಲೆಸಿದ್ದಾರೆ. ಅವರು ಆಗಾಗ್ಗೆ ದೇಣಗೇರಿ ಗ್ರಾಮಕ್ಕೆ ಬಂದು ತಮ್ಮ ಆಸ್ತಿಗಳ ಮೇಲ್ವಿಚಾರಣೆಯನ್ನು ನೋಡಿಕೊಂಡು ಹೋಗುತ್ತಿದ್ದರು. ಪ್ರತಿವಾದಿಗಳು

ವಾದಿಗೆ ಸೇರಿದ ಸ್ವತ್ತನ್ನು ಒತ್ತುವರಿ ಮಾಡಿಲ್ಲದೇ ಇದ್ದರೂ ಸಹಾ ವಾದಿಯ ನಮ್ಮ ಕುಟುಂಬಸ್ತರಾಗಿರುವುದರಿಂದ ಅವರಿಗೆ ಅನುಕೂಲ ಮಾಡಿಕೊಡುವ ಉದ್ದೇಶದಿಂದ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ- ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿದಾರರ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸ ಇ

(ಸಾಕ್ಷಿದಾರರ ಸಹಿ) ಸಹಿ

ಹಿರಿಯ ಸಿವಿಲ್ ನ್ಯಾಯಾಧೀಶರು
ವಿರಾಜಪೇಟೆ.